ನನ್ನ ಓದು

# ಎಲ್ಲರಿಗಾಗಿ ಬೆಲ್ ಹುಕ್ಸ್ ಪ್ರೀತಿ ಮೀಮಾಂಸೆ



**ಅರುಣ್ ಜೋಳದಕೂಡ್ಲಿಗಿ**

ಆಫ್ರೋ-ಅಮೆರಿಕನ್ ಬರಹಗಾರ್ತಿ, ಸ್ತ್ರೀವಾದಕ್ಕೆ ಪ್ರೀತಿಯ ಕಣ್ಣು ಕೊಟ್ಟ ಚಿಂತಕಿ ಮೂಲತಃ ಗ್ಲೋರಿಯಾ ಜೀನ್ ವಾಟ್ಕಿನ್ ಆದ 'ಬೆಲ್‌ಹುಕ್ಸ್' ಕನ್ನಡಕ್ಕೆ ಮತ್ತೆ ಮತ್ತೆ ಬರುತ್ತಿದ್ದಾರೆ. ಅವರ ಆಲೋಚನೆಗಳು ಕನ್ನಡದ ಚಿಂತನೆಯ ಜತೆಗೆ ನಿಧಾನಕ್ಕೆ ಬೆರೆಯುತ್ತಿವೆ. ಬೆಲ್ ಹುಕ್ಸ್‌ರ ಮುಖ್ಯವಾದ ಐದು ಕೃತಿಗಳನ್ನು ಎಚ್.ಎಸ್. ಶ್ರೀಮತಿ ಅನುವಾದಿಸಿದ್ದಾರೆ. ಈ ಸಂದರ್ಭದಲ್ಲಿ ಈ ಐದೂ ಕೃತಿಗಳನ್ನು ಚರ್ಚಿಸುವ ಮೂಲಕ ಬೆಲ್ ಹುಕ್ಸ್ ಚಿಂತನೆಯನ್ನು ಮತ್ತಷ್ಟು ವಿಸ್ತರಿಸಬೇಕಾಗಿದೆ.

ಈ ತನಕ 'ಎಲ್ಲರಿಗಾಗಿ ಸ್ತ್ರೀವಾದ' (ಫೆಮಿನಿಸಂ ಫಾರ್ ಎವೆರಿಬಡಿ: ಪ್ಯಾಶನೇಟ್ ಪಾಲಿಟಿಕ್ಸ್, 2000), 'ಸ್ತ್ರೀವಾದ: ಅಂಚಿನಿಂದ ಕೇಂದ್ರದೆಡೆಗೆ' (ಫೆಮಿನಿಸಂ ಥಿಯರಿ: ಫ್ರಂ ಮಾರ್ಜಿನ್ ಟು ಸೆಂಟರ್, 1984), 'ಬಾರಯ್ಯ ಮಮಬಂಧು' (ದ ವಿಲ್ ಟು ಚೇಂಜ್: ಮೆನ್, ಮಸ್ಕುಲಿನಿಟಿ ಅಂಡ್ ಲವ್, 2004), 'ಸಾಂಗತ್ಯ' (ಕಮ್ಯೂನಿಯನ್: ದಿ ಫೀಮೇಲ್ ಸರ್ಚ್ ಫಾರ್ ಲವ್, 2002), 'ಬಂಧಮುಕ್ತ' (ಸಾಲ್ವೇಷನ್: ಬ್ಲಾಕ್ ಪೀಪಲ್ ಅಂಡ್ ಲವ್, 2001) – ನಾಲ್ಕು ವರ್ಷಗಳ ಅವಧಿಯಲ್ಲಿ (2020-2024) ಐದು ಪುಸ್ತಕಗಳು ಕನ್ನಡಕ್ಕೆ ಬಂದಿವೆ.

ಲೋಕವನ್ನು ಆಳುತ್ತಿರುವ, ಸಮಾಜದ ಎಲ್ಲಾ ವಲಯಗಳಲ್ಲಿ ಆಳದಲ್ಲಿ ಬೇರೂರಿರುವ ಪಿತೃಪ್ರಧಾನತೆಯ ರೋಗ ಗಂಡು ಹೆಣ್ಣನ್ನು ಕೂಡಿಯೆ ಬಲಿ ಪಡೆಯುತ್ತಿದೆ. ಪಿತೃಪ್ರಧಾನತೆಯು ಬೇಟೆಗಾರನ ಸ್ಥಾನದಲ್ಲಿದ್ದರೆ, ಗಂಡು ಹೆಣ್ಣುಗಳಿಬ್ಬರೂ ಬಲಿಪಶುವಿನ ಸ್ಥಾನದಲ್ಲಿದ್ದಾರೆ. ಆದರೆ ಗಂಡು ತನ್ನನ್ನೂ ಬಲಿ ಪಡೆಯುತ್ತಿರುವ 'ಪಿತೃಪ್ರಧಾನತೆಯ' ಒಳಗೇ ಸೇರಿಕೊಂಡು ತನ್ನನ್ನು ಬೇಟೆಗಾರನ ಅಂದರೆ ಆಳುವ 'ಯಜಮಾನ'ನ ಸ್ಥಾನದಲ್ಲಿಯೂ, ಮಹಿಳೆಯನ್ನು ಬಲಿಪಶುವಿನ ಅಂದರೆ 'ಗುಲಾಮಳ' ಸ್ಥಾನದಲ್ಲಿಯೂ ನೋಡುತ್ತಿದ್ದಾನೆ. ಸ್ತ್ರೀವಾದದ ತೊಡಕೆಂದರೆ ಈ ಎದುರಾಳಿತನವನ್ನೇ ತನ್ನ ಅಸ್ತ್ರವನ್ನಾಗಿಸಿಕೊಂಡಿರುವುದು. ಇದನ್ನು ಕಂಡುಕೊಳ್ಳುವ ಮೊದಲ ಹಂತದಲ್ಲಿ ಬೆಲ್‌ಹುಕ್ಸ್ ಈತನಕ ಚಾಲ್ತಿಯಲ್ಲಿದ್ದ ಸ್ತ್ರೀವಾದಿ ಸಿದ್ಧಾಂತಗಳನ್ನು ಶಸ್ತ್ರಚಿಕಿತ್ಸೆಗೆ ಒಳಗುಮಾಡುತ್ತಾರೆ. ಅದರಲ್ಲೂ ಮುಖ್ಯವಾಗಿ ಬಿಳಿ ಮಹಿಳೆಯರು ಕಟ್ಟಿದ ಸ್ತ್ರೀವಾದಿ ದೃಷ್ಟಿಕೋನದಲ್ಲಿದ್ದ ಪುರುಷ-ಮಹಿಳೆಯ ಎದುರಾಳಿತನದ ವ್ಯಾಖ್ಯಾನಗಳನ್ನು ಪ್ರಶ್ನಿಸುತ್ತಾರೆ. 19 ವರ್ಷದ ಹುಡುಗಿ ಇರುವಾಗಲೇ ಬರಹ ಆರಂಭಿಸಿದ ಬೆಲ್ ಹುಕ್ಸ್ ತಮ್ಮ 29ನೇ ವಯಸ್ಸಿನಲ್ಲಿ, 1981ರಲ್ಲಿ 'ಏಂಟ್ ಐ ಎ ವುಮನ್: ಬ್ಲಾಕ್ ವುಮನ್ ಅಂಡ್ ಫೆಮಿನಿಸಂ' ಕೃತಿಯಲ್ಲಿ ಈ ಪ್ರಶ್ನೆಗಳನ್ನು ಎತ್ತುತ್ತಾರೆ.